ಜೇನು ತುಪ್ಪ ಇರುವುದಿಲ್ಲ. ಮೊಟ್ಟೆ ಇಟ್ಟ ಮೂರೇ ದಿನಗಳಲ್ಲಿ ಅವು ಒಡೆದು ಪುಟ್ಟ ಮರಿಗಳು ಅಥವಾ ಲಾರ್ವಾಗಳು ಹೊರಬರುತ್ತವೆ. ಇವು ಹೊರಬರುತ್ತಿದ್ದಂತೆ ಪರಿಚಾರಿಕೆಯರು (ಕೆಲಸದ ಜೇನು ನೊಣಗಳು) ಇವುಗಳಿಗೆ ತಿನ್ನಿಸಲು ತೊಡಗುತ್ತವೆ. ಇವುಗಳ ಆಹಾರ ಏನು ಗೊತ್ತೇನೆ ಮೇಬಲ್?...''

``ರಾಜಪಾಕ?'' ಅಂದಾಜಿನಲ್ಲಿ ಹೇಳಿದಳು ಮೇಬಲ್.

``ಸರಿಯಾಗಿಯೇ ಹೇಳಿದೆ. ಪರಿಚಾರಿಕೆ ಜೇನ್ನೊಣಗಳು ಈ ಪಾಕವನ್ನು ತಮ್ಮೊಳಗಿನ ಗ್ರಂಥಿಗಳಲ್ಲಿ ತಯಾರಿಸಿ ಜೇನು ಹುಟ್ಟುಗಳ ಗೂಡುಗಳಲ್ಲಿ ತುಂಬಿಸುತ್ತವೆ. ಮರಿಗಳು ಇದನ್ನು ತಿಂದು ದೊಡ್ಡದಾಗುತ್ತವೆ. ಮುಂದೇನಾಗುತ್ತದೆ ಎಂದು ಕೇಳು ಮೇಬಲ್...''

ಒಂದು ದೊಡ್ಡ ರಹಸ್ಯವನ್ನು ಭೇದಿಸಿದವನಂತೆ ನಾಟಕೀಯವಾಗಿ ಅವಳನ್ನೇ ದಿಟ್ಟಿಸಿ ನೋಡುತ್ತಾ ಕೆಲವು ಕ್ಷಣ ಮೌನವಾಗಿ ಬಿಟ್ಟ. ನಂತರ ತಾನು ನಿನ್ನೆ ರಾತ್ರಿ ಓದಿ ಮಗುಚಿಟ್ಟ ನಿಯತಕಾಲಿಕವನ್ನು ತೆರೆಯತೊಡಗಿದ.

``ಅದು ಏನೆಂದು ಬೇಗ ಹೇಳಬಾರದೆ ಆಲ್ಬರ್ಟ್?'' ಮೇಬಲ್ ಅಸಹನೆಯಿಂದ ಹೇಳಿದಳು.

``ಈ ಪಾಕ ಎಷ್ಟೊಂದು ಪುಷ್ಟಿದಾಯಕವೆಂದರೆ, ಇದನ್ನು ತಿಂದ ಜೇನ್ನೊಣ ಮರಿ ಒಂದು ವಾರದೊಳಗೇ ತನ್ನ ವಜನನ್ನು 1,500 ಪಟ್ಟು ಹೆಚ್ಚಿಸಿಕೊಳ್ಳುತ್ತದೆ!''

``ಏನಂದ್ರಿ!!'' ಮೇಬಲ್ ಆಶ್ಚರ್ಯಚಕಿತಳಾದಳು.

``ಸಾವಿರದ ಐನೂರು ಪಟ್ಟು ಮೇಬಲ್!... ಇದನ್ನು ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ...'' ತಾನೇನೋ ಬಹಳ ಗೋಪ್ಯ ವಿಚಾರವನ್ನು ಹೊರಗೆಡುವುತ್ತಿದ್ದೇನೆ ಎನ್ನುವಂತೆ ಮುಂದಕ್ಕೆ ಬಗ್ಗಿ ಪಿಸುದನಿಯಲ್ಲಿ ಹೇಳತೊಡಗಿದ:

